KACM200005462016

# ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕಡೂರು

ಉಪಸ್ಥಿತರುಃ- ಶ್ರೀಮತಿ. ಸುಜಾತ ಸುವರ್ಣ ಬಿ,
ಬಿ.ಕಾಂ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,
ಕಡೂರು, ಚಿಕ್ಕಮಗಳೂರು ಜಿಲ್ಲೆ.

**ಅಸಲು ದಾವಾ ಸಂಖ್ಯೆ 41/2016**

ದಿನಾಂಕಃ 5 ನೇ ಡಿಸೆಂಬರ್-2023.

ವಾದಿಯರುಃ

1. ಶ್ರೀ ವಿಜಯಕುಮಾರ್,
ಬಿನ್ ಬಸಪ್ಪ,
ವಯಸ್ಸುಃ ಸುಮಾರು 35 ವರ್ಷ,

2. ಶ್ರೀ ದರ್ಶನ್,
ಬಿನ್ ಚಂದ್ರಶೆಟ್ಟಿ
ವಯಸ್ಸುಃ ಸುಮಾರು 31 ವರ್ಷ,

3. ಶ್ರೀ ನಾಗಪ್ಪ ಶೆಟ್ಟಿ
ಬಿನ್ ಅಣ್ಣಪ್ಪ ಶೆಟ್ಟಿ
ವಯಸ್ಸುಃ ಸುಮಾರು 33 ವರ್ಷ,

1 ರಿಂದ 3 ನೇ ವಾದಿಯರ ವಾಸಃ
ಬೆಟ್ಟದಮಳಲಿ ಗ್ರಾಮ,
ಆವತಿ ಹೋಬಳಿ,
ಚಿಕ್ಕಮಗಳೂರು ತಾಲ್ಲೂಕು ಮತ್ತು ಜಿಲ್ಲೆ.

4. ಶ್ರೀ ಸತೀಶ,
ಬಿನ್ ಸಿದ್ದಶೆಟ್ಟಿ
ವಯಸ್ಸುಃ ಸುಮಾರು 33 ವರ್ಷ,
ವಾಸಃ ಸಾರಗೋಡು ಗ್ರಾಮ,
ಖಾಂಡ್ಯ ಹೋಬಳಿ,
ಚಿಕ್ಕಮಗಳೂರು ತಾಲ್ಲೂಕು ಮತ್ತು ಜಿಲ್ಲೆ.

(ಅರ್ಜಿದಾರರ ಪರವಾಗಿಃ ಶ್ರೀ ಡಿ.ಚಿದಾಂಬರ, ವಕೀಲರು)

- ವಿರುದ್ಧ -

ಪ್ರತಿವಾದಿಯರು ಃ 1. ಶ್ರೀ ಆರ್.ಕೆ. ವಿನಯ್ ಬಾಬು,
ಬಿನ್ ಎಲ್.ಸಿ. ರವೀಂದ್ರ ಕುಮಾರ್,
ವಯಸ್ಸುಃ ಸುಮಾರು 28 ವರ್ಷ,
ವಾಸಃ ವೆಂಕಟೇಶ್ವರ ನಗರ,
ಕಡೂರು ಟೌನ್,
ಪ್ರಸ್ತುತ ವಾಸಃ ಮಲ್ಲೇಶ್ವರ ಗ್ರಾಮ,
ತಮ್ಮಯ್ಯ ಬಡಾವಣೆ, ಮಲ್ಲೇಶ್ವರ,
ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

2. ಶ್ರೀ ಕೆ.ಎನ್.ವೀರಣ್ಣಗುಪ್ತಾ,
ಬಿನ್ ನಾರಾಯಣಶೆಟ್ಟಿ
ವಯಸ್ಸುಃ ಸುಮಾರು 74 ವರ್ಷ,

3. ಶ್ರೀ ಕೆ.ವಿ. ಸಂತೋಷ ಕುಮಾರ್,
ಬಿನ್ ಕೆ.ಎನ್.ವೀರಣ್ಣಗುಪ್ತಾ,
ವಯಸ್ಸುಃ ಸುಮಾರು 45 ವರ್ಷ,

4. ಶ್ರೀ ಕೆ.ಎಸ್. ಮಿಥುನ್,
ಬಿನ್ ಲೇಟ್ ಕೆ.ವಿ. ಸಂತೋಷ ಕುಮಾರ್,
ವಯಸ್ಸುಃ ಸುಮಾರು 23 ವರ್ಷ,

2 ರಿಂದ 4 ನೇ ಪ್ರತಿವಾದಿಯರ ವಾಸಃ
ಶ್ರೀ ಸಾಯಿ ವಾಸವಿ ನಿಲಯ,
ಲಕ್ಷ್ಮೀಶನಗರ, ಡೋರ್ ನಂಬರ್-389,
4 ನೇ ತಿರುವು, ಕಡೂರು ಟೌನ್,
ಚಿಕ್ಕಮಗಳೂರು ಜಿಲ್ಲೆ.

(1 ಪ್ರತಿವಾದಿಯ ಪರವಾಗಿಃ ಶ್ರೀ ಕೆ.ಎಸ್.ರೇಣುಕಾ ಪ್ರಸಾದ್, ವಕೀಲರು)

(2 ರಿಂದ 4 ನೇ ಪ್ರತಿವಾದಿಯರ ಪರವಾಗಿಃ ಶ್ರೀ ಕೆ.ಎನ್.ಮಂಜುನಾಥ, ವಕೀಲರು)

<u>ಮಧ್ಯಂತರ ಅರ್ಜಿ ಸಂಖ್ಯೆ-12 ರ ಪಕ್ಷಗಾರರು</u>

ಅರ್ಜಿದಾರರು/
ಪ್ರತಿವಾದಿಯರು ಃ ಶ್ರೀ ಆರ್.ಕೆ. ವಿನಯ್ ಬಾಬು ಮತ್ತು ಇತರರು.

- ವಿರುದ್ಧ -

ಎದುರುದಾರರು/
ವಾದಿಯರು ಃ ವಿಜಯಕುಮಾರ್ ಮತ್ತು ಇತರರು.

| | | |
|---|---|---|
| *i* | ಯಾವ ಕಾಯ್ದೆ / ಕಲಂ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆಃ - | ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಜೊತೆಗೆ ಕಲಂ 151 ರ ಅಡಿಯಲ್ಲಿ |
| *ii* | ಯಾವ ಪರಿಹಾರಕ್ಕಾಗಿಃ- | ಪ್ರತಿವಾದ ಪತ್ರವನ್ನು ತಿದ್ದುಪಡಿ ಮಾಡಲು ಕೋರಿ |
| *iii* | ಯಾವ ದಿನಾಂಕದಂದು ಅರ್ಜಿಯನ್ನು ಸಲ್ಲಿಸಲಾಗಿದೆಃ- | ದಿನಾಂಕಃ 13.01.2023 |
| *iv* | ಅರ್ಜಿಯ ಸಂಖ್ಯೆಃ | 12 |
| *v* | ಅರ್ಜಿಗೆ ವಿರುದ್ಧವಾಗಿ ಆಕ್ಷೇಪಣೆಗಳನ್ನು ಸಲ್ಲಿಸಿದ ದಿನಾಂಕಃ- (ಪ್ರತ್ಯೇಕವಾಗಿ) | ದಿನಾಂಕಃ 10.02.2023. |
| *vi* | ಸದರಿ ಅರ್ಜಿಯ ಮೇಲೆ ಘೋಷಿಸಿದ ಆದೇಶದ ದಿನಾಂಕಃ- | ದಿನಾಂಕಃ 05.12.2023. |

## ಮಧ್ಯಂತರ ಅರ್ಜಿ ಸಂಖ್ಯೆ-12 ರ ಮೇಲಿನ ಆದೇಶ

ಅರ್ಜಿದಾರರು ಮಧ್ಯಂತರ ಅರ್ಜಿ ಸಂಖ್ಯೆ-12 ನ್ನು ಕ್ರಮಾದೇಶ 6 ನಿಯಮ 17 ಸಹಕಲಂ 151 ರ ರೀತ್ಯಾ ಅರ್ಜಿಯನ್ನು ಸಲ್ಲಿಸಿ, ಪ್ರತಿವಾದ ಪತ್ರದಲ್ಲಿ ಅರ್ಜಿಯಲ್ಲಿ ಹೇಳಿದ ಅಂಶವನ್ನು ತಿದ್ದುಪಡಿ ಮಾಡಲು ಅವಕಾಶ ನೀಡಬೇಕೆಂದು ಕೋರಿಕೊಂಡಿರುತ್ತಾರೆ. ಪ್ರತಿವಾದಿಯರ ವಿಚಾರಣೆಗೆ *ನಿಗಧಿಪಡಿಸಿದ ಮುದ್ದತ್ತಿನಂದು, ಪ್ರತಿವಾದಿಯರು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.*

2. ಮಧ್ಯಂತರ ಅರ್ಜಿಗೆ ಪೂರಕವಾಗಿ ಅರ್ಜಿದಾರರು / ಪ್ರತಿವಾದಿಯರು ಪ್ರಮಾಣ ಪತ್ರವನ್ನು ಸಲ್ಲಿಸಿ, ತಮ್ಮ ಪ್ರಮಾಣ ಪತ್ರದಲ್ಲಿ, ವಾದಿಯು ಪ್ರತಿವಾದಿಯರ ವಿರುದ್ಧ ಕರಾರಿನ ನಿರ್ಧಿಷ್ಟ ಪರಿಪಾಲನೆಯ ಡಿಕ್ರಿ ಆದೇಶ ಮಾಡಬೇಕೆಂದು ಪರಿಹಾರ ಕೋರಿದ್ದು, ಸದರಿ ದಾವೆಯು ಅವರ ವಿಚಾರಣೆಯ ಹಂತದಲ್ಲಿರುತ್ತದೆ. ಅವರ ಅಜಾಗರೂಕತೆ ಮತ್ತು ಅನಾನುಕೂಲತೆಯಿಂದ ಪ್ರತಿವಾದ ಪತ್ರವನ್ನು ತಿದ್ದುಪಡಿ ಮಾಡಿರುವುದಿಲ್ಲ. ಆದಾಗ್ಯೂ ಸಹ ಅವರು ಯಾವುದೇ ರೀತಿಯಾದಂತಹ ಕ್ರಯಪತ್ರವಾಗಲೀ ಅಥವಾ ದಾಖಲೆಗಳಾಗಲೀ ಮಾಡಿರುವುದಿಲ್ಲ, ಆದರೆ ವಾದಿಯರು ಸುಳ್ಳು ಕಟ್ಟು ಕತೆಗಳನ್ನು ಕಟ್ಟಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ ಪ್ರತಿವಾದ ಪತ್ರವನ್ನು ತಿದ್ದುಪಡಿ ಮಾಡಲೆಂದು ಅರ್ಜಿಯನ್ನು ಸಲ್ಲಿಸಿದ್ದು, ಆ ಅರ್ಜಿಯಲ್ಲಿನ ಅಂಶವನ್ನು ಪ್ರತಿವಾದ ಪತ್ರದಲ್ಲಿ ಸೇರಿಸಬೇಕೆಂದು ಕೋರಿರುತ್ತಾರೆ. ಒಂದು ವೇಳೆ ಅರ್ಜಿಯನ್ನು ಪುರಸ್ಕರಿಸಿದ್ದಲ್ಲಿ, ವಾದಿಯರಿಗೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ.

3. ವಾದಿಯರ ಪರ ವಕೀಲರು ಮಧ್ಯಂತರ ಅರ್ಜಿಗೆ ತಮ್ಮ ತಕರಾರನ್ನು ಸಲ್ಲಿಸಿದ್ದು, ತಕರಾರಿನಲ್ಲಿ ಅರ್ಜಿದಾರರು / 1 ನೇ ಪ್ರತಿವಾದಿ ಸಲ್ಲಿಸಿದಂತಹ ಅರ್ಜಿಗೆ ಯಾವುದೇ ಸಕಾರಣ ಇದ್ದಿರುವುದಿಲ್ಲ. ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ಕಾನೂನಿನ ಅಡಿಯಲ್ಲಿ ಪರಿಗಣಿಸಲಾಗುವುದಿಲ್ಲ, ಏಕೆಂದರೆ ವಿಚಾರಣೆಯು ಆರಂಭವಾದ ನಂತರ ಕಾನೂನಿನ ಅಡಿಯಲ್ಲಿ ತಿದ್ದುಪಡಿಯನ್ನು ಅನುಮತಿಸಲಾಗುವುದಿಲ್ಲ. ಈ ಆಧಾರದ ಮೇಲೆ ಅರ್ಜಿಯನ್ನು ವಜಾಗೊಳಿಸಬಹುದಾಗಿರುತ್ತದೆ.

ಅರ್ಜಿದಾರರು ಸಲ್ಲಿಸಿರುವ ಅರ್ಜಿಯು ಹಾಗೂ ಪ್ರಮಾಣ ಪತ್ರವನ್ನು ನಂಬಲು ಯಾವುದೇ ಆಧಾರ ಇರುವುದಿಲ್ಲ. ದಾವೆಯಲ್ಲಿ ವಿಚಾರಣೆಯನ್ನು ಮಾಡಿಸಿದ ನಂತರ ಕೇವಲ ದಾವೆಯನ್ನು ಮುಂದೂಡುವ ಸಲುವಾಗಿ ಈ ಅರ್ಜಿಯನ್ನು ಸಲ್ಲಿಸಿದ್ದು, ಇದು ಕಾನೂನಿನ ಅಡಿಯಲ್ಲಿ ಸಮರ್ಥನೀಯವಾಗಿರುವುದಿಲ್ಲ. ಒಂದು ವೇಳೆ ಅರ್ಜಿಯನ್ನು ಪುರಸ್ಕರಿಸಿದ್ದಲ್ಲಿ, ದಾವೆಯ ಸ್ವರೂಪ ಬದಲಾವಣೆಯಾಗುವ ಸಂಭವ ಇರುತ್ತದೆ ಮತ್ತು ಈ ನ್ಯಾಯಾಲಯದ ಪರಿವ್ಯಾಪ್ತಿಗೆ ಬರುವುದಿಲ್ಲ. ವಾದಿಯರಿಗೆ ತೊಂದರೆ ಕೊಡುವ ಸಲುವಾಗಿ ಅರ್ಜಿದಾರರು ಈ ಅರ್ಜಿಯನ್ನು ವಾದಿಯು ತನ್ನ ಸಾಕ್ಷ್ಯವನ್ನು ಪೂರ್ಣಗೊಳಿಸಿದ ನಂತರ ಸಲ್ಲಿಸಲಾಗಿದ್ದು, ಈ ಕಾರಣದಿಂದಲೂ ಅರ್ಜಿಯನ್ನು ವಜಾಗೊಳಿಸಬಹುದಾಗಿರುತ್ತದೆ.

ಮಧ್ಯಂತರ ಅರ್ಜಿಯಲ್ಲಿ ಕೋರಿರುವ ತಿದ್ದುಪಡಿಯ ಅಂಶವು ಈ ದಾವೆಗೆ ಅಗತ್ಯವಿರುವುದಿಲ್ಲ ಮತ್ತು 1 ನೇ ಪ್ರತಿವಾದಿಯ ಲಿಖಿತ ಹೇಳಿಕೆಯಲ್ಲಿ ಪ್ರಸ್ತುತ ಅರ್ಜಿಯಲ್ಲಿರುವ ಅಂಶವನ್ನು ಹೇಳಿರುವುದರಿಂದ,

ಕಾನೂನಿನ ಅಡಿಯಲ್ಲಿ ಸಮರ್ಥನೀಯವಾಗಿರುವುದಿಲ್ಲ. ಪ್ರಸ್ತುತ ತಿದ್ದುಪಡಿ ಅರ್ಜಿಯ ಅಂಶವು ಹಾಗೂ 1 ನೇ ಪ್ರತಿವಾದಿ ದಿನಾಂಕಃ01.10.2022 ರಂದು ಸಲ್ಲಿಸಿರುವ ಅರ್ಜಿಯಲ್ಲಿನ ಅಂಶವು ಒಂದೇ ಆಗಿದ್ದು, ಆ ಅರ್ಜಿಯಲ್ಲಿ 14 ನೇ ಲೈನಿನ ನಿ.ಪಿ-1 ರಲ್ಲಿ ಎಂದು ನಮೂದಿಸಿದ್ದು, ಪ್ರಸ್ತುತ ಅರ್ಜಿಯಲ್ಲಿ ಅದನ್ನು ಹೊರತುಪಡಿಸಿದ ಉಳಿದ ಅಂಶಗಳನ್ನು ಉಲ್ಲೇಖಿಸಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ದಿನಾಂಕಃ 04.01.2022 ರ ಪಿ.ಡಬ್ಲ್ಯೂ-1 ರವರ ಪಾಟೀ ಸವಾಲಿನಲ್ಲಿ ಹೇಳಿರುವ ಸಾಕ್ಷ್ಯದ ಲೋಪವನ್ನು ತುಂಬಿಸುವ ಸಲುವಾಗಿ ಈ ಅರ್ಜಿಯನ್ನು ಸಲ್ಲಿಸಿದ್ದು, ದಿನಾಂಕಃ17/02/2022 ರಂದು ಪಿ.ಡಬ್ಲ್ಯು-1 ರವರು ತಮ್ಮ ಪಾಟೀ ಸವಾಲಿನಲ್ಲಿ ಎಲ್.ಸಿ ರವೀಂದ್ರ ಇವರ ಮಾಲೀಕತ್ವದ ಬಗ್ಗೆ ನುಡಿದಿದ್ದು, ಈ ವಿಚಾರವನ್ನು 1 ನೇ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದ ಪ್ಯಾರಾ ನಂ.12 ರಲ್ಲಿ ತಿಳಿಸಿದ್ದು ಪುನಃ ಆ ವಿಚಾರವನ್ನೆ ತಿದ್ದುಪಡಿ ಮಾಡಲು ತಿಳಿಸಿರುವುದು ಕಾನೂನುಬದ್ದವಾಗಿರುವುದಿಲ್ಲ. ಕೇವಲ ಈ ಪ್ರತಿವಾದ ಪತ್ರವನ್ನು ದಾವೆಯನ್ನು ಮುಂದೂಡಲು ಸಲ್ಲಿಸಿದ್ದಾಗಿದೆ. ಆದ್ದರಿಂದ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ.

4. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು.

5. ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುವ ಅಂಶಗಳುಃ-

*1.*ಪ್ರತಿವಾದಿಯು ತಮ್ಮ ಅರ್ಜಿಯಲ್ಲಿ ತಿದ್ದುಪಡಿ ಮಾಡಲು ತಿಳಿಸಿದಂತಹ ವಿಷಯಗಳು ದಾವೆಯಲ್ಲಿರುವ ನಿಜವಾದ ಪ್ರಶ್ನೆಗಳನ್ನು

ನಿರ್ಧರಿಸುವ ಉದ್ದೇಶಕ್ಕಾಗಿ ಅವಶ್ಯಕವಾಗಿದೆ ಎಂಬುದನ್ನು ಪುರಾವೆಗೊಳಿಸಿರುತ್ತಾರೆಯೇ?

2. ಯಾವ ಆದೇಶ?

6. ಪ್ರತಿವಾದಿಯ ಪರ ವಕೀಲರ ವಾದವನ್ನು ಕೇಳಿ, ವಾದಿಯರ ಮೌಖಿಕ ಸಾಕ್ಷ್ಯ ಮತ್ತು ಪ್ರತಿವಾದಿಯ ಪರ ದಸ್ತಾವೇಜುಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ನ್ಯಾಯಾಲಯವು ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದೆ.

ಅಂಶ-1 ಃ ಸಕಾರಾತ್ಮಕವಾಗಿ,

ಅಂಶ-2 ಃ ಅಂತಿಮ ಆದೇಶದಂತೆ,

ಈ ಕೆಳಕಂಡ ಕಾರಣಗಳಿಗಾಗಿ,

## ಕಾ ರ ಣ ಗಳು

7. ಅಂಶ-1ಃ ಅರ್ಜಿದಾರರು ಮಧ್ಯಂತರ ಅರ್ಜಿಯನ್ನು ಸಲ್ಲಿಸಿ, ಪ್ರತಿವಾದ ಪತ್ರವನ್ನು ತಿದ್ದುಪಡಿ ಮಾಡಲು ಅವಕಾಶ ನೀಡಬೇಕೆಂದು ಕೋರಿಕೊಂಡಿರುತ್ತಾರೆ. ಅರ್ಜಿದಾರರು / ಪ್ರತಿವಾದಿಯರ ಪ್ರಕಾರ ವಾದಿಯು ಪ್ರತಿವಾದಿಯರ ವಿರುದ್ಧ ಕರಾರಿನ ನಿರ್ಧಿಷ್ಟ ಪರಿಪಾಲನೆಯ ಡಿಕ್ರಿ ಆದೇಶ ಮಾಡಬೇಕೆಂದು ಪರಿಹಾರ ಕೋರಿದ್ದು, ಸದರಿ ದಾವೆಯು ಅವರ ವಿಚಾರಣೆಯ ಹಂತದಲ್ಲಿರುತ್ತದೆ. ಅವರ ಅಜಾಗರೂಕತೆ ಮತ್ತು ಅನಾನುಕೂಲತೆಯಿಂದ ಪ್ರತಿವಾದ ಪತ್ರವನ್ನು ತಿದ್ದುಪಡಿ ಮಾಡಿರುವುದಿಲ್ಲ. ಆದಾಗ್ಯೂ ಸಹ ಅವರು ಯಾವುದೇ ರೀತಿಯಾದಂತಹ ಕ್ರಯಪತ್ರವಾಗಲೀ ಅಥವಾ ದಾಖಲೆಗಳಾಗಲೀ ಮಾಡಿರುವುದಿಲ್ಲ, ಆದರೆ ವಾದಿಯರು ಸುಳ್ಳು ಕಟ್ಟು ಕತೆಗಳನ್ನು ಕಟ್ಟಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ ಪ್ರತಿವಾದ

ಪತ್ರವನ್ನು ತಿದ್ದುಪಡಿ ಮಾಡಲೆಂದು ಅರ್ಜಿಯನ್ನು ಸಲ್ಲಿಸಿದ್ದು, ಆ ಅರ್ಜಿಯಲ್ಲಿನ ಅಂಶವನ್ನು ಪ್ರತಿವಾದ ಪತ್ರದಲ್ಲಿ ಸೇರಿಸಬೇಕಾಗಿರುತ್ತದೆ ಎಂಬುದಾಗಿರುತ್ತದೆ.

8. ವಾದಿಯರ ಪ್ರಕಾರ, ಪ್ರಸ್ತುತ ತಿದ್ದುಪಡಿ ಅರ್ಜಿಯ ಅಂಶವು ಹಾಗೂ 1 ನೇ ಪ್ರತಿವಾದಿ ದಿನಾಂಕಃ01.10.2022 ರಂದು ಸಲ್ಲಿಸಿರುವ ಅರ್ಜಿಯಲ್ಲಿನ ಅಂಶವು ಒಂದೇ ಆಗಿದ್ದು, ಆ ಅರ್ಜಿಯಲ್ಲಿ 14 ನೇ ಲೈನಿನ ನಿ.ಪಿ-1 ರಲ್ಲಿ ಎಂದು ನಮೂದಿಸಿದ್ದು, ಪ್ರಸ್ತುತ ಅರ್ಜಿಯಲ್ಲಿ ಅದನ್ನು ಹೊರತುಪಡಿಸಿದ ಉಳಿದ ಅಂಶಗಳನ್ನು ಉಲ್ಲೇಖಿಸಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

9. ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರಲ್ಲಿ ಈ ಕೆಳಕಂಡಂತೆ ಉಲ್ಲೇಖವಿರುತ್ತದೆಃ-

*ಕ್ರಮಾದೇಶ-6 ನಿಯಮ 17 ರಡಿಯಲ್ಲಿಃ ನ್ಯಾಯೋಚಿತವಾಗಬಹುದಾದ ರೀತಿಯಲ್ಲಿ ಮತ್ತು ಅಂಥ ನಿಬಂಧನೆಗಳ ಮೇಲೆ ಯಾವನೇ ಪಕ್ಷಗಾರನು ವಾದ ಪ್ರತಿವಾದ ಪತ್ರವನ್ನು ಬದಲಾಯಿಸಲು ಅಥವಾ ತಿದ್ದುಪಡಿ ಮಾಡಲು ವ್ಯವಹರಣೆಯ ಯಾವುದೇ ಹಂತದಲ್ಲಿ ನ್ಯಾಯಾಲಯವು ಅವನಿಗೆ ಅವಕಾಶ ಕೊಡಬಹುದು ಮತ್ತು ಪಕ್ಷಕಾರರ ನಡುವೆ ವಾದದಲ್ಲಿರುವ ನಿಜವಾದ ಪ್ರಶ್ನೆಗಳನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಅವಶ್ಯವಾಗಬಹುದಾದಂತಹ ಎಲ್ಲ ದುರಸ್ತುಗಳನ್ನು ಮಾಡತಕ್ಕದ್ದು ಪರಂತು ಅಧಿವಿಚಾರಣೆ ಪ್ರಾರಂಭವಾದ ನಂತರ ಯುಕ್ತ ಎಚ್ಚರಿಕೆ ವಹಿಸಿದಾಗ್ಯೂ ಅಧಿ ವಿಚಾರಣೆಯ ಪ್ರಾರಂಭಕ್ಕೆ ಪೂರ್ವದಲ್ಲಿ ಪಕ್ಷಕಾರರು ಆ ವಿಷಯವನ್ನು ವಾದಿಸುವುದು ಆಗುತ್ತಿರಲಿಲ್ಲ ಎಂಬ*

*ನಿರ್ಣಯಕ್ಕೆ ನ್ಯಾಯಾಲಯವು ಬರದ ಹೊರತು, ತಿದ್ದುಪಡಿಯ ಯಾವುದೇ ಅರ್ಜಿಯನ್ನು ಅನುಮತಿಸತಕ್ಕುದಲ್ಲ.*

10. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪುಜನ್ಯ ಸಿವಿಲ್ ಅಪೀಲು ನಂಬರ್ 5909 of 2022 (Arising out of SLP(C) No. 22443 of 2019) ಲೈಫ್ ಇನ್ಸುರೆನ್ಸ್ ಕಾರ್ಪೂರೇಶನ್ ಆಫ್ ಇಂಡಿಯಾ ವಿರುದ್ಧ ಸಂಜೀವ್ ಬಿಲ್ಡರ್ಸ್ ಪ್ರೈ. ಲಿಮಿಟೆಡ್ ಮತ್ತು ಇತರರ ಪ್ರಕರಣದಲ್ಲಿನ ಪ್ಯಾರಾ ನಂಬರ್-70 ರಲ್ಲಿ ಈ ಕೆಳಗಿನ ತತ್ವವನ್ನು ಉಲ್ಲೇಖಿಸಿರುತ್ತಾರೆ.

*Para No.70:- Our final conclusions may be summed up thus:*

*(ii) All amendments are to be allowed which are necessary for determining the real question in controversy provided it does not cause injustice or prejudice to the other side. This is mandatory, as is apparent from the use of the word "shall", in the latter part of Order VI Rule 17 of the CPC.*

*(iii) The prayer for amendment is to be allowed*

*(i) if the amendment is required for effective and proper adjudication of the controversy between the parties, and*

*(ii) to avoid multiplicity of proceedings, provided*

*(a) the amendment does not result in injustice to the other side,*

*(b) by the amendment, the parties seeking amendment does not seek to withdraw any clear admission made by the party which confers a right on the other side and*

*(c) the amendment does not raise a time barred claim, resulting in divesting of the other side of a valuable accrued right (in certain situations).*

*(iv) A prayer for amendment is generally required to be allowed unless*

*(i) by the amendment, a time barred claim is sought to be introduced, in which case the fact that the claim would be time barred becomes a relevant factor for consideration,*

*(ii) the amendment changes the nature of the suit,*

*(iii) the prayer for amendment is malafide, or*

*(iv) by the amendment, the other side loses a valid defence.*

*(v) In dealing with a prayer for amendment of pleadings, the court should avoid a hypertechnical approach, and is ordinarily required to be liberal especially where the opposite party can be compensated by costs.*

*(vi) Where the amendment would enable the court to pin-pointedly consider the dispute and would aid in rendering a more satisfactory decision, the prayer for amendment should be allowed.*

*(vii) Where the amendment merely sought to introduce an additional or a new approach without introducing a time barred cause of action, the amendment is liable to be allowed even after expiry of limitation.*

*(viii) Amendment may be justifiably allowed where it is intended to rectify the absence of material particulars in the plaint.*

*(ix) Delay in applying for amendment alone is not a ground to disallow the prayer. Where the aspect of delay is arguable, the prayer for amendment could be allowed and the issue of limitation framed separately for decision.*

*(x) Where the amendment changes the nature of the suit or the cause of action, so as to set up an entirely new case, foreign to the case set up in the plaint, the amendment must be disallowed. Where, however, the amendment sought is only with respect to the relief in the plaint, and is predicated on facts which are already pleaded in the plaint, ordinarily the amendment is required to be allowed.*

11. ಅರ್ಜಿದಾರರು ತಮ್ಮ ಪ್ರತಿವಾದ ಪತ್ರದಲ್ಲಿ, ಅವರು ದಿನಗೂಲಿಗಾಗಿ ಡ್ರೈವರ್ ಕೆಲಸ ಮಾಡುತ್ತಿದ್ದು, ಆದರೆ ವಾದಿಯ ಪ್ರಕಾರ ಅವರು ಲಾರಿಯ ಮಾಲೀಕರು ಎಂಬುದು ಸರಿಯಾಗಿರುವುದಿಲ್ಲ ಹಾಗೂ ಅವರು 34 ಲಕ್ಷ ರೂಪಾಯಿಗಳನ್ನು ವಾದಿಯಿಂದ ಪಡೆದುಕೊಂಡಿರುವುದಿಲ್ಲ ಮತ್ತು ಅವರಿಂದ ಹಣ ಪಡೆದುಕೊಳ್ಳುವಂತಹ ಅವಶ್ಯಕತೆ ಇದ್ದಿರುವುದಿಲ್ಲ. ವಾದಿಗೆ ಹಣವನ್ನು ಪಾವತಿಸುವಂತಹ ಆರ್ಥಿಕ ಸಾಮರ್ಥ್ಯ ಇದ್ದಿರುವುದಿಲ್ಲ. ವಾದಿಯು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ಸೇರಿಸಬೇಕೆಂದು ಕೋರಿಕೊಂಡಿರುತ್ತಾರೆ.

12. ಪ್ರತಿವಾದಿಯ ಪ್ರಕಾರ, ವಾದಿಗೆ 34 ಲಕ್ಷ ರೂಗಳನ್ನು ಕೊಡುವಂತಹ ಸಾಮರ್ಥ್ಯ ಇಲ್ಲ ಎಂಬುದಾಗಿರುತ್ತದೆ. ಪ್ರತಿವಾದಿಯರು ವಾದಿಗೆ ಅಷ್ಟು ಮೊತ್ತವನ್ನು ಕೊಡುವ ಸಾಮರ್ಥ್ಯ ಇಲ್ಲವೆಂಬುದನ್ನು ಸಮರ್ಥಿಸಬೇಕಾದ್ದಲ್ಲಿ ಅದರ ಬಗ್ಗೆ ಪ್ರತಿವಾದ ಪತ್ರದಲ್ಲಿ ಖಂಡನೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ವಾದಿ ಈ ದಾವೆಯನ್ನು ಪ್ರತಿವಾದಿ ವಿರುದ್ಧ ಕರಾರಿನ ನಿರ್ದಿಷ್ಟ ಪರಿಹಾರವನ್ನು ಕೋರಿ ಸಲ್ಲಿಸಿದ್ದಾಗಿರುತ್ತದೆ. ಆದ್ದರಿಂದ, ತಿದ್ದುಪಡಿ ಮಾಡಲು ಕೋರಿದ ಅಂಶವು ಪಕ್ಷಕಾರರ ನಡುವೆ ವಾದದಲ್ಲಿರುವ ನಿಜವಾದ ಪ್ರಶ್ನೆಗಳನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಅವಶ್ಯವಾಗಿರುತ್ತದೆ. ಪ್ರತಿವಾದಿ ತನ್ನ ಪ್ರತಿವಾದ ಪತ್ರವನ್ನು 2016 ರಲ್ಲಿ ಸಲ್ಲಿಸಿರುವುದರಿಂದ, ಅರ್ಜಿಯನ್ನು ರೂ.1,500/- ಗಳ ಖರ್ಚಿನೊಂದಿಗೆ ಪುರಸ್ಕರಿಸುವುದು ಸೂಕ್ತವೆಂದು ಪರಿಗಣಿಸಿ, ಅಂಶ-1 ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

13. <u>ಅಂಶ-3ಃ-</u> ಮೇಲೆ ಹೇಳಿದ ಕಾರಣಗಳಿಂದಾಗಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## ಆದೇಶ

ಅರ್ಜಿದಾರರು / ಪ್ರತಿವಾದಿಯರು ಮಧ್ಯಂತರ ಅರ್ಜಿ-12, ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹಕಲಂ 151ರ ಅಡಿಯಲ್ಲಿ ಸಲ್ಲಿಸಿದಂತಹ ಅರ್ಜಿಯನ್ನು ರೂ.1,500/- ಗಳ ಖರ್ಚಿನೊಂದಿಗೆ ಪುರಸ್ಕರಿಸಲಾಗಿದೆ.

(ತೀರ್ಪನ್ನು ಬೆರಳಚ್ಚುಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ , ನಂತರ ಓದಿ, ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ 5 ನೇ ಡಿಸೆಂಬರ್-2023 ರಂದು ಘೋಷಿಸಲಾಯಿತು)

ಸಹಿ/-
(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕಡೂರು.